International Journal of Kannada Research 2015; 1(1): 01-04




International Journal of Kannada Research
www.kannadajournal.com

**ISSN: 2454–5813**
IJSR 2015; 1(1): 01-04
© 2015 IJKS
www.kannadajournal.com
Received: 15-06-2015
Accepted: 17-07-2015

**Meenakshi Bali**
Associate Professor & Research Guide, Hkes's M.S.I. Degree College Of Arts, Science & Commerce, Aiwan-E-Sahi, Kalaburagi-585102. Karnataka.

**Correspondence**
**Meenakshi Bali**
Associate Professor & Research Guide, Hkes's M.S.I. Degree College Of Arts, Science & Commerce, Aiwan-E-Sahi, Kalaburagi-585102. Karnataka.

# ಅತ್ಯಾಚಾರ ಪ್ರವೃತ್ತಿಯ ಬೇರು ಬುಡ

**Meenakshi Bali**

ಇನ್ನೇನು ಹದಿನೇಳು ಮುಗಿದು ಹದಿನೆಂಟಕ್ಕೆ ಕಾಲಿಡಬೇಕು.ಅಚ್ಚ ಬಿಳಿಯ ಬಣ್ಣ.ಸಪೂರಾದ ಮೈ ಮಾಟ. ಬಟ್ಟಲು ಕಣ್ಣುಗಳು,ನೀಳ ಮೂಗು,ಥೇಟ್ ಹಳೆಯ ಹಿಂದಿ ಸಿನೇಮಾದ ಹಿರೋಯಿನ್ ಶರ್ಮಿಳಾ ಟ್ಯಾಗೋರನಂತೆಯೆ ಕಾಣಿಸುತ್ತಿದ್ದ ಈ ಹುಡುಗಿಗೆ ತಿಂಗಳೊಪ್ಪತ್ತಿನಲ್ಲಿ ಮದುವೆಯಾಗುವದಿತ್ತು. ಬೆಂಗಳೂರಿಗೆ ಹೊಟ್ಟೆ ಹೊರೆದುಕೊಳ್ಳಲೆಂದು ಹೋಗಿದ್ದ ಹೈದ್ರಾಬಾದ ಕರ್ನಾಟಕದ ಯಾದಗಿರಿ ಜಿಲ್ಲೆಯ ತೀರ ಸಣ್ಣ ಹಳ್ಳಿಯೊಂದರ ನಿವಾಸಿಗಳಾದ ಅಲ್ಪಸಂಖ್ಯಾತ ಕುಟುಂಬದಲ್ಲಿ ಜನಿಸಿದ ಈ ಹುಡುಗಿಯು ಮದುವೆಯ ತಯಾರಿಗೆಂದೆ ಬೆಂಗಳೂರಿನಿಂದ ಹಳ್ಳಿಗೆ ಬಂದಿದ್ದಳು. ಕಣ್‍ಭರ್ತಿ ತಾನು ಮದುವೆಯಾಗಲಿರುವ ಗ್ಯಾರೇಜ್ ಮೆಕ್ಯಾನಿಕನಾಗಿರುವ ಅವಳ ಪಾಲಿಗೆ ರಾಜಕುಮಾರನೆ ಆಗಿರುವ ಕಿಶೋರ ಕಂಗಳ ಹುಡುಗನ ಕನಸು ಹೊತ್ತುಕೊಂಡು ನಲಿಯುತ್ತಿದ್ದ ಮಗಳು ಬಟ್ಟೆ ತೊಳೆಯಲೆಂದು ಹಳ್ಳಕ್ಕೆ ಹೋದವಳು ನಡು ಮದ್ಯಾನದಲ್ಲಿ ಹೆಣವಾಗಿ ಬಿದ್ದಿದ್ದಳು. ಸರುಹೊತ್ತಾದರೂ ಹಳ್ಳಕ್ಕೆ ಹೋದ ಮಗಳು ಬರಲಿಲ್ಲವೆಂದು ಅಡ್ರಾಸಿ ಹುಡುಕುತ್ತಿರಲು.ಯಾರೋ ಹೇಳಿದರಂತೆ ನಿಮ್ಮ ಮನೆಯ ಬಟ್ಟೆ ಹಳ್ಳದಲ್ಲಿಯೆ ತೇಲುತ್ತಿವೆ ನೋಡ್ರಿ ಎಂದರಂತೆ. ಮನೆ ಮಂದಿಯೆಲ್ಲ ಹುಡುಕುತ್ತ ಹೋದರೆ ಕಂಡದೇನು. ಅವಳ ಪುಟ್ಟ ತಮ್ಮ,ತಂಗಿ ಎರಡೂ ಹುಡುಗರು ಓಡೋಡಿ ಹೋಗಲು ಹಳ್ಳದಾಚೆ ಪಕ್ಕದ ಜಾಲಿ ಕಂಟಿಯ ಹಳುವಿನಲ್ಲಿ ಅಕ್ಕ ಅಂಗಾತ ಬಿದ್ದಿದಾಳೆ. ಬಟ್ಟೆ ಅರೆ ತೆರೆದುಕೊಂಡಿವೆ.ಕುತ್ತಿಗೆಯಲ್ಲಿ ಹಾಕಿಕೊಂಡಿದ್ದ ಸೂಫಿಸರಮಸ್ತ ದರ್ಗಾದ ಸಂತನ ಕರಿದಾರದಿಂದಲೆ ಹುರಿ ಹೊಡೆದು, ಬಿಚ್ಚದಂತೆ ದಾರಕೊಂದು ಮೀಣಿ ಬಿಗಿದಿದೆ.ಎರಡೂ ಕಣ್ಣುಗಳಲ್ಲಿ ಜಾಲಿಮುಳ್ಳ ಚುಚ್ಚಿ ರಕ್ತವು ಮೂಗಿನ ಧಾರೆಗುಂಟ ಹರಿದು ಹೆಪ್ಪುಗಟ್ಟಿ ಘಟಿಸಿರಬಹುದಾದ ಘಟನೆಯ ಸಾಕ್ಷಿ ನುಡಿಯುತ್ತಿದೆ.ಪಾಪ ಅದೇನೆಂದು ಅರಿಯದ ಎರಡೂ ಸಣ್ಣ ಮಕ್ಕಳು ತಮ್ಮ ದೀದಿ ಇನ್ನು ಬದುಕಿರಬಹುದೆ ಎಂದು ಸರಸರನೆ ಕುತ್ತಿಗಿಗೆ ಸುತ್ತಿದ ದಾರದ ಮಿಣಿ ಬಿಡಿಸಿವೆ. ಗಾಬರಿಯಲ್ಲಿಯೆ ಮುಖಕ್ಕೆ ಹಳ್ಳದ ನೀರು ಸಿಂಪಡಿಸಿವೆ. ಬಾಯಿಗೆ ಬಾಯಿ ಕೊಟ್ಟು ಗಾಳಿ ನೀಡಲು ಹವಣಿಸಿವೆ.ಎದೆ ಬಡಿಯುತ್ತಿರಬಹುದೆ ಮುಟ್ಟಿ ನೋಡಿವೆ.ಯಾವುದಕ್ಕೂ ಸ್ಪಂದಿಸದಾಗ ಹೊಯ್ಯಕೊಂಡು ಬೋರಾಡಿ ಅಳಲು ಸುರುವಿಟ್ಟುಕೊಂಡಿವೆ. ಅಷ್ಟರಲ್ಲಿ ದೊಡ್ಡವರು ಬಂದು ಮಗಳ ಅವಸ್ಥೆ ಕಂಡು ಇದು ಅತ್ಯಾಚಾರವಲ್ಲದೆ ಮತ್ತೇನು ಅಲ್ಲ ಎಂಬುದು ಖಾತ್ರಿಯಾದಾಗಲೆ ಪೋಲೀಸ್ ಸ್ಟೇಷನ್‌ಗೆ ತಿಳಿಸಲು ಅವರು ಬಂದು ತೀರ ಎಂದರೆ ತೀರ ಮೇಲ್ಪದರಿನ ಪಂಚನಾಮೆ ಮಾಡಿ ಶವ ಒಯ್ದು ಪೋಸ್ಟಮಾರ್ಟಂ ಮಾಡದೆ ಸತಾಯಿಸತೊಡಗಿದಾಗ ಧೀಡಿರನೆ ಮುಷ್ಕರ ನಡೆದು ಆನಂತರ ಮರುದಿನ ಮದ್ಯಾನದ ಬಳಿಕ ಶವ ನೀಡಲಾಗಿದೆ. ದೇಶದಲ್ಲಿ ಅತ್ಯಾಚಾರಕ್ಕೆ ಸಂಬಂಧಿಸಿ ಗರಂ ಹವಾ ಇರುವುದರಿಂದ ಪೋಸ್ಕೊ ಅಡಿಯಲ್ಲಿ ಎಫ್ ಆಯ್ ಆರ್ ಏನೋ ಆಗಿದೆ. ಅದರೆ ಘಟನೆ ನಡೆದು ತಿಂಗಳಾಗುತ್ತ ಬಂದರೂ ಆರೋಪಿಗಳನ್ನು ಬಂಧಿಸುವ ಯಾವ ಪ್ರಯತ್ನಗಳು ಗಂಭೀರವಾಗಿ ನಡೆಯಲೆ ಇಲ್ಲ. ಆನಂತರ ಮಹಿಳಾ ಮತ್ತು ದಲಿತ ಸಂಘಟನೆಗಳು ಮಧ್ಯಸ್ಥಿಕೆ ವಹಿಸಿ ಹೋರಾಟ, ಒತ್ತಡ ಇತ್ಯಾದಿಗಳೆಲ್ಲ ನಡೆದವು. ಈಗ ಅಪರಾಧಿಗಳನ್ನು ಬಂಧಿಸಲಾಗಿದೆ. ಮುಂದೆ ಚಾರ್ಜ ಸೀಟ ಹಾಕುವುದು. ಶಿಕ್ಷೆ ಆಗುವುದೋ ಇಲ್ಲವೊ? ಅದೆಲ್ಲ ದೊಡ್ಡ ರಗಳೆ ಅದಿರಲಿ. ಇಲ್ಲಿ ನಾವು ಕೇಳಿಕೊಳ್ಳಬೇಕಾದ ಮುಖ್ಯ ಸಂಗತಿಯೆಂದರೆ ಮಹಿಳಾ ದೌರ್ಜನ್ಯ,ಅತ್ಯಾಚಾರ ಕುರಿತು ನಿರ್ಭಯ ಪ್ರಕರಣದಿಂದಾಗಿ ದೇಶದಾದ್ಯಂತೆ ದೊಡ್ಡ ಹೋರಾಟದ ಅಲೆ ಎದ್ದು ಒಂದು ತಕ್ಕ ಮಟ್ಟಿಗೆ ಸಶಕ್ತ ಎನ್ನಬಹುದಾದ ಕಾನೂನು ತರಲು ಸಾಧ್ಯವೇನೊ ಆಯಿತು.ಅದರೆ ಈ ಕಾನೂನಿಂದಾದ ಪರಿಣಾಮ ಏನು? ಎಷ್ಟರ ಮಟ್ಟಿಗೆ ಈ ಕಾನೂನು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಮಹಿಳೆಯರ ಮೇಲೆ ಅತ್ಯಾಚಾರಗಳು ಎಲ್ಲಿಯೂ ನಡೆದಂತೆ ತಡೆಯಲು ಈ ಒಂದು ಕಾನೂನಿಂದಲೆ ಸಾಧ್ಯವೆ? ಎಂಬತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ.

ಒಂದೆಡೆ ಮೀಡಿಯಾಗಳಲ್ಲಿ ಕ್ಷಣ ಕ್ಷಣಕ್ಕೂ ದೇಶದ ಮೂಲೆ ಮೂಲೆಯಲ್ಲಿ ಸಂಭವಿಸುತ್ತಿರುವ ಅತ್ಯಾಚಾರಗಳ ವರದಿಯು ನಾಗರಿಕರನ್ನು ನಿದ್ದೆಗೆಡಿಸುತ್ತಿದೆ.ಇನ್ನೊಂದಡೆ ಅಯ್ಯೊ! ಕಾನೂನು ಜಾರಿಯಿಂದಲೆ ಇಂಥ ಘಟನೆಗಳು ಹೆಚ್ಚಾಗುತ್ತಿವೆ ಎಂಬ ಅಸಡ್ಡೆ ಮನೋಭಾವ ಮಗದೊಂದೆಡೆ ದಿನನಿತ್ಯ ದೃಶ್ಯ ಮಾಧ್ಯಮಗಳಲ್ಲಿ ರೋಚಕ ವರದಿಗಳನ್ನು ನೋಡಿ ನೋಡಿ ಓಹ್ ಇದು

ಮಾಮೂಲು ಬಿಡಿ ಎಂಬ ಔದಾಸಿನ್ಯ ಹರಳಗಟ್ಟುತ್ತ ಹೋಗುತ್ತಿವೆ. ನಿರ್ಭಯ ಪ್ರಕರಣವು ಅತ್ಯಾಚಾರಗಳ ಕುರಿತು ದೇಶದಲ್ಲಿ ಒಂದು ಗಂಭೀರ ಎಚ್ಚರ ಮೂಡಿಸಿತು ಎಂಬುದೇನೋ ಸರಿ.ಅದರೆ ಇದು ಅತ್ಯಾಚಾರಗಳನ್ನು ನಿಲ್ಲಿಸುವಲ್ಲಿ ಪೂರ್ತಿ ಯಶಸ್ವಿಯಾಗಿದೆ ಎಂದು ಹೇಳಲಾಗದು. ಇತ್ತಿಚೆಗೆ ಮಾತ್ರ ಅತ್ಯಾಚಾರ ಪ್ರಕರಣಗಳು ಸಂಖ್ಯಾತ್ಮಕವಾಗಿ ಹೆಚ್ಚಾಗುತ್ತಿವೆ.ಈ ಮೊದಲು ಇಷ್ಟು ಇರಲಿಲ್ಲ ಎಂದೇನೂ ಅಲ್ಲ. ಕಳೆದ ಅರ್ಧ ಶತಕದಿಂದಲೂ ಪ್ರತಿ ೫ ನಿಮಿಷಕ್ಕೊಂದು ದೌರ್ಜನ್ಯ,ಅರ್ಧ ತಾಸಿಗೊಂದು ವರದಕ್ಷಿಣೆ ಸಾವು,ತಾಸಿಗೊಂದು ಲೈಂಗಿಕ ಕಿರುಕುಳ ಜರಗುತ್ತಲೆ ಇರುತ್ತವೆ ಎಂಬ ತಥ್ಯಗಳು ಬಹು ಕಾಲದಿಂದಲೂ ವರದಿಯಾಗುತ್ತಲೆ ಇವೆ. ಈ ಮೊದಲು ಅತ್ಯಾಚಾರಕ್ಕೆ ಬಲಿಯಾದವರೂ ತಮ್ಮ ಮಾನವೆ ಹೋದಾತು ಎಂಬ ಹುಸಿ ಮೌಲ್ಯಕ್ಕೆ ಹೆದರಿ ಕೇಸು,ಕಚೇರಿ ಎಂದು ಮುಂದೆ ಬರುತ್ತಿರಲಿಲ್ಲ.ನಮ್ಮ ಮಡಿವಂತ ಸಮಾಜದಲ್ಲಿ ಅತ್ಯಾಚಾರಕ್ಕೊಳಗಾದವರೆ ಶಿಕ್ಷೆಗೆ ಗುರಿಯಾಗಬೇಕಾದ ವಿಚಿತ್ರ ಪರಿಸ್ಥಿತಿ ಇದೆ. ಅದರಂತೆ ವರದಕ್ಷಿಣೆ ನಿಷೇಧ ಎಂಬ ಕಾನೂನು ಮೊದಲು ವರದಕ್ಷಿಣೆ ಕೊಡುವವರಿಂದಲೆ ಉಲಂಘನೆಗೆ ಒಳಗಾಗುತ್ತಿದೆ. ಶೀಲ,ಪಾವಿತ್ರ್ಯ ಇತ್ಯಾದಿ ಸನಾತನ ವ್ಯವಸ್ಥೆ ಹುಟ್ಟುಹಾಕಿದ ಸ್ತ್ರೀ ವಿರೋಧಿ ಮೌಲ್ಯಗಳನ್ನು ಸುಖಿಸುವಂತೆ ಮಾಡಿರುವುದರಿಂದಲೆ ಇಂದಿಗೂ ಮಹಿಳೆಯರು ತಮ್ಮ ಅಸ್ಮಿತೆಯನ್ನು ಅನುಸಂಧಾನ ಗೈಯಲು ಸಾಧ್ಯವಾಗುತ್ತಿಲ್ಲ.

ಶೀಲ ಎಂದರೇನು? ಅದು ಮನಸಿನ ಮೈಲಿಗಯೇ? ಅಥವಾ ದೇಹದ ತೊಗಲಿಗೆ ಅಂಟಿರುವ ಸೂತಕವೇ? ಎಂಬುದನ್ನು ವಾಸ್ತವಿಕ ನೆಲೆಯಲ್ಲಿ ಈವರೆಗೂ ನಿಷ್ಕರ್ಷೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ.ಅಷ್ಟಕ್ಕೂ ಶೀಲವು ಹೆಣ್ಣಿಗೆ ಮಾತ್ರ ಕಾಡುವ ಸಂಗತಿ ಏಕಾಯಿತು? ಎಂಬ ಪ್ರಶ್ನೆಯು ಇದೆಯಲ್ಲ.ಪ್ರಕೃತಿ ಸಹಜವಾದ ದೇಹದ ಕಾಮನೆಗಳಲ್ಲಿ ಗಂಡು,ಹೆಣ್ಣು ಭೇದವಿದೆಯೇ? ಇಬ್ಬರು ತಿನ್ನುವ ಅನ್ನ,ನೀರು. ಬೆಳೆದ ವಾತಾವರಣ ಒಂದೆ ಬಗೆಯಾಗಿರುವಾಗಲೂ ಪುರುಷರೇಕೆ ಕಂಡ ಕಂಡಲ್ಲಿ ವಿವೇಚನಾರಹಿತವಾಗಿ ಸ್ತ್ರೀಯರನ್ನು ಒತ್ತಾಯಪೂರ್ವಕವಾಗಿ ಭೋಗಿಸುವ ಚಟಕ್ಕೆ ಬೀಳುತ್ತಾರೆ. ಲೈಂಗಿಕ ಕಾಮನೆಗಳ ಬಗೆಗೆ ಸ್ತ್ರೀಯರಲ್ಲಿರುವ ಸಯಂಮವು ಪುರುಷರಲ್ಲಿ ಏಕೆ ಇಲ್ಲ. ಹಾಗಾದರೆ ಗಂಡು,ಹೆಣ್ಣುಗಳಲ್ಲಿ ಜೆನೆಟಿಕ್ ಸಮಸ್ಯೆ ಏನಾದರೂ ಇದೆಯೇ? ಗಂಡಸರು ಲೈಂಗಿಕ ವಿಷಯ ಕುರಿತು ಹೆಚ್ಚು ಆಕ್ರಮಣಕಾರಿಯಾಗಿರಲು ಪ್ರಕೃತಿ ಸಹಜ ವೈಜ್ಞಾನಿಕ ಕಾರಣಗಳೇನಾದರೂ ಇವೆಯೇ? ಎಂದೆಲ್ಲಾ ಪತ್ತೆ ಹಚ್ಚುವ ಸಂಶೋಧನೆ ನಡೆಸಲಾಗುತ್ತಿದೆ. ಈವರೆಗೆ ಆ ಬಗೆಯ ತಥ್ಯಗಳೇನು ಪತ್ತೆಯಾದಂತಿಲ್ಲ. ಹೀಗಿರುವಾಗಲೂ ಮತ್ತೇಕೆ ಸ್ತ್ರೀಯರು ಕ್ಷಣ ಕ್ಷಣಕ್ಕೂ ತನ್ನ ಸಹಜೀವಿಯಾದ ಪುರುಷರಿಂದ ಬರ್ಬರಿಕ ಅತ್ಯಾಚಾರಕ್ಕೆ ಒಳಗಾಗುತ್ತಾರೆ.ಹೀಗೆ ಅತ್ಯಾಚಾರಕ್ಕೆ ಒಳಗಾದಾಗಲೆಲ್ಲ ಶರೀರದ ನೋವಿಗಿಂತಲೂ ಅಸಹನೀಯವಾದ ಮಾನಸಿಕ ಆಘಾತಕ್ಕೆ ಒಳಗಾಗುತ್ತಾರೆ. ಏನು ಅರಿಯದ ಹಸುಳೆಗಳು ಕೂಡ ಈ ಬಗೆಯ ಅತ್ಯಾಚಾರಗಳಿಂದ ವಿಚಿತ್ರ ಮಾನಸಿಕ ಕ್ಷೋಬೆಗೆ ಒಳಗಾಗುತ್ತವೆ ಎಂಬ ಸಂಗತಿಗಳು ನಮ್ಮನ್ನು ಹೆಚ್ಚು ಆತಂಕಿತವಾಗಿಸುತ್ತವೆ.

ಇತ್ತಿಚೀನ ೨೦೧೧ ರ ಸಮೀಕ್ಷೆಯು ದೇಶದಲ್ಲಿ ದಿನವೊಂದಕ್ಕೆ ಸರಾಸರಿ ೬೮ ಅತ್ಯಾಚಾರಗಳು ಪ್ರತಿ ೩ ನಿಮಿಷಕ್ಕೊಂದು ದೌರ್ಜನ್ಯಗಳು ಪ್ರತಿ ಅರ್ಧ ಗಂಟೆಗೊಂದು ವರದಕ್ಷಿಣೆ ಸಾವು ಘಟಿಸುತ್ತಿವೆ ಎಂದು ಹೇಳಿದೆ. ೨೦೧೨ ರಲ್ಲಿ ಒಟ್ಟು ೨,೪೪,೨೭೦ ದೌರ್ಜನ್ಯಗಳು ದಾಖಲಾಗಿದ್ದು ೨೦೧೧ ಕ್ಕಿಂತ ೬.೮% ರಷ್ಟು ಹೆಚ್ಚಾಗಿವೆ.ಎನ್‌ಸಿಆರ್‌ಬಿ ವರದಿಯ ಪ್ರಕಾರ ೨೦೦೧ ರಿಂದ ೨೦೧೧ ರ ಅವಧಿಯಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಧಾಳಿಗಳ ಸಂಖ್ಯೆ ೪೩,೩೩೮. ಕರ್ನಾಟಕವೂ ಇದಕ್ಕೆ ಹೊರತಾಗಿಲ್ಲ. ಕಳೆದ ೧೦ ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ೪೬೮೩ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಅತ್ಯಾಚಾರ ಘಟಿಸಿ ಪೋಲೀಸ್ ಕಚೇರಿಗೆ ಬಂದರೂ ದಾಖಲಾಗದ ಪ್ರಕರಣಗಳ ಲೆಕ್ಕವಿಟ್ಟದ್ದು ಇಲ್ಲ. ಇನ್ನು ಅತ್ಯಾಚಾರವಾದಾಗಲೂ ಬಾಯಿ ಮುಚ್ಚಿಕೊಂಡು ಕುಳಿತವರಿಗಂತೂ ಲೆಕ್ಕವೆ ಇಲ್ಲ. ಒಟ್ಟು ಮಹಿಳೆಯರ ಮೇಲಿನ ಘಟಿಸುತ್ತಿರುವ ಅತ್ಯಾಚಾರಗಳಲ್ಲಿ ೩೭% ರಷ್ಟು ಅಪರಾಧಗಳು ನೆರೆಹೊರೆಯವರಿಂದ ,ಸಂಬಂಧಿಕರಿಂದ,ಸ್ನೇಹಿತರಿಂದ ನಡೆಯುತ್ತಿವೆ. ಸಮೀಪದವರಿಂದ ಆದ ಅತ್ಯಾಚಾರಗಳು ಬಹುತರವಾಗಿ ಬಯಲಿಗೆ ಬರುವುದೆ ಇಲ್ಲ.

ಜಗತಿನಾದ್ಯಂತ ಮಹಿಳೆಯರು ಒಂದಲ್ಲ ಒಂದು ಬಗೆಯಲ್ಲಿ ಅತ್ಯಾಚಾರಕ್ಕೆ ಒಳಗಾಗುತ್ತಾರೆ ಎಂಬುದೇನೊ ಸರಿ. ಅದರೆ ಭಾರತದಲ್ಲಿಯ ಮಹಿಳೆಯರ ಮೇಲೆ ಅನೂಚಾನವಾಗಿ ನಡೆದುಕೊಂಡು ಬರುತ್ತಿರುವ ಅತ್ಯಾಚಾರಗಳಿಗೆ ಕಾರಣಗಳು ನಮ್ಮ ಸಾಮಾಜಿಕ ವ್ಯವಸ್ಥೆಯ ಆಳದಲ್ಲಿಯೆ ಹುದುಗಿವೆ ಎಂಬುದನ್ನು ನಾವು ಮತ್ತೆ ಮತ್ತೆ ಗಟ್ಟಿಯಾಗಿ ಹೇಳಬೇಕಾಗಿದೆ. ಶತಮಾನಗಳಿಂದಲೂ ಮಹಿಳೆಯರನ್ನು ಭೋಗದ ವಸ್ತುವೆಂದು,ಕಾಮದ ಗೊಂಬೆ,ಮೈಲಿಗೆ,ಮಾಯೆ,ಆತ್ಮಹೀನೆ, ಪಾಪಿಷ್ಟೆ ಮುಂತಾಗಿ ತಿರಸ್ಕರಿಸುವುದು. ಇಲ್ಲವೆ ಅವಳ ಅಸೀಮ ಧಾರಣ ಶಕ್ತಿಯನ್ನು ಗೌರವಿಸದೆ ಬಳಸಿಕೊಳ್ಳವುದು ನಡದೆ ಇದೆ. ಇನ್ನೊಂದೆಡೆ ಸ್ತ್ರೀಯರು ದುಡಿಯಲು ಮಾತ್ರ ಯೋಗ್ಯರು, ಸೇವಾ ದುರಂಧರರು ಎಂಬ ಪಟ್ಟ ನೀಡುವುದು.

ಹೆಣ್ಣು,ಹೆಣ್ತನದ ಬಗೆಗೆ ಅದೇಷ್ಟು ಅಪಸವ್ಯಗಳನ್ನು ಹರಿಬಿಡಲಾಗಿದೆ ಎಂದರೆ ಮಹಿಳೆಯರು ಅನ್ಯಾಯ,ಅತ್ಯಾಚಾರಗಳನ್ನು ಸಹಿಸಿಕೊಳ್ಳಲೆಂದೆ ಹುಟ್ಟಿದವರು ಎಂಬ ನಂಬಿಕೆಯು ತುಂಬಾ ಆಳವಾಗಿ ಹೆಣ್ಣು,ಗಂಡುಗಳಾದಿಯಾಗಿ ಸಮಾಜದೆಲ್ಲರಲ್ಲಿ ಮನೆ ಮಾಡಿಕೊಂಡಿದೆ. ಈ ನಂಬಿಕೆಗಳು ಪ್ರಕೃತಿದತ್ತವಾಗಿ ಬಂದವುಗಳೇನಲ್ಲ. ಪುರುಷ ಪ್ರಧಾನ ವ್ಯವಸ್ಥೆಯು ತನ್ನ ಸ್ವಾರ್ಥಕ್ಕಾಗಿಯೇ ಇವಗಳನ್ನು ಹರಿಬಿಟ್ಟಿದೆ ಅಷ್ಟೇ ಅಲ್ಲ.ಇವುಗಳು ಅನುಲಂಘನೀಯ ನಿಯಮಗಳೆಂದು ಪ್ರತಿಪಾದಿಸಿಕೊಂಡು ಬರುತ್ತಿದೆ.ಭಾರತದ ಬಹು ದೊಡ್ಡ ದಾರ್ಶನಿಕ ಕೃತಿಯೆಂದು ಬಿಂಬಿಸಲಾಗುತ್ತಿರುವ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು

" ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಪ ಸ್ಯುಃ ಪಾಪಯೋನಯಃ
ಸ್ತ್ರೀಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿ ಪರಾಂ ಗತಿಮ್॥

ಅಧ್ಯಾಯ ೯ ಶ್ಲೋಕ ೩೨ ರಲ್ಲಿ ಫತ್ವಾ ಹೊರಡಿಸುತ್ತಾನೆ. ಇದರ ತಾತ್ಪರ್ಯವೆಂದರೆ ಹೇ ಅರ್ಜುನ ಪಾಪಯೋನಿಜರಾದ ಸ್ತ್ರೀಯರು ವೈಶ್ಯರು ಮತ್ತು ಶೂದ್ರರು ನನ್ನನ್ನು ಆಶ್ರಯಿಸಿ ಪರಮಗತಿಯನ್ನು ಪಡೆಯಬಲ್ಲರು ಎನ್ನುತ್ತಾನೆ. ಜೀವಜಗತ್ತಿನ ಉಗಮ ಸ್ಥಾನವಾದ ಯೋನಿಯನ್ನು ಪಾಪವೆಂದು ವಿಚಿತ್ರವೆಂದರೆ ಅದೇ ಯೋನಿಯಲ್ಲಿ ಜನಿಸಿದ ಪುರುಷರು ಮಾತ್ರ ಪವಿತ್ರವೆಂದು ಸಾರುತ್ತಾರೆ. ಪ್ರಾಚೀನ ಭಾರತದ ಬಹು ದೊಡ್ಡ ರಾಜ ತಂತ್ರಜ್ಞನೆಂದು ಪರಿಗಣಿತವಾಗುತ್ತಿರುವ ಚಾಣಕ್ಯನು ತನ್ನ ಕೃತಿಯ ಎರಡನೆ ಅಧ್ಯಾಯದಲ್ಲಿ

"ಭೋಜ್ಯಂ ಭೋಜನಶಕ್ತಶ್ಚ ರತಿಶಕ್ತಿರ್ವಂಗನಾ।
ವಿಭವೋ ದಾನಶಕ್ತಿಶ್ಚ ನ್ಯಾಲ್ಪಸ್ಯ ತಪಯಃ ಫಲಃ॥ ಎನ್ನುತ್ತಾನೆ.

ಇದರ ಅರ್ಥ ಸೇವಿಸಲು ಒಳ್ಳೆ ಆಹಾರ,ಅದನ್ನು ಅರಗಿಸಲು ಚೆನ್ನಾದ ಪಚನ ಶಕ್ತಿ,ಸುಂದರ ಸ್ತ್ರೀಯನ್ನು ಪತ್ನಿ ಮಾಡಿಕೊಳ್ಳುವುದು,ಅವಳನ್ನು ಅಪಹರಿಸಲು ಪೌರುಷ.ಹಣವನ್ನು ದಾನಕ್ಕೆ ಉಪಯೋಗಿಸುವುದು ದೀರ್ಘ ತಪಸ್ಸಿನಿಂದ ಮಾತ್ರ ಪಡೆಯಬಹುದು ಎಂದು ಹೇಳುತ್ತಾನೆ. ಸ್ತ್ರೀಯರನ್ನು ಅಪರಿಸುವುದೇ ಪೌರುಷದ ಸಂಕೇತವೆಂದು ಬಿಂಬಿಸುವ ಮೂರ್ಖತನಕ್ಕೆ ಏನೇನಬೇಕು ತಿಳಿಯುವದಿಲ್ಲ. ಮನು ಮಹಾಶಯನಂತೂ ಸ್ತ್ರೀಯರಿಗೆ ಮರಣ ಶಾಸನವನ್ನೆ ರಚಿಸಿದ್ದಾನೆ. ತನ್ನ ಕೃತಿಯ ೮ ನೇ ಅಧ್ಯಾಯದ ಶ್ಲೋಕ ೧೭ ರಲ್ಲಿ

ಶಯ್ಯಾಸನಮಲಂಕಾರಂ ಕಾಮಂ ಕ್ರೋಧಮನಾರ್ಜವಂ
ದ್ರೋಹಭಾವಂ ಕುಚರ್ಯಾಂ ಚ ಸ್ತ್ರೋಭ್ಯೋ ಮನುರಕಲ್ಪಯತ್॥

ತಾತ್ಪರ್ಯವೆಂದರೆ ಶಯ್ಯೆ,ಆಸನ,ಅಲಂಕಾರ ಇವುಗಳ ಮೋಹ ಕಾಮ,ಕ್ರೋಧ,ಅಪ್ರಮಾಣಿಕತೆ,ಪತಿದ್ರೋಹ ಮತ್ತು ದುರ್ನಡತೆ ಇವು ಸಾಮಾನ್ಯವಾಗಿ ಸ್ತ್ರೀಯರಲ್ಲಿರುವ ಸ್ವಾಭಾವಿಕ ಗೂಣಗಳೆಂದು ಫರಮಾನು ಹೊರಡಿಸುತ್ತಾನೆ. ಮತ್ತೂ ಮುಂದುವರೆದು ಅದೇ ಅಧ್ಯಾಯದ ೧೯ ನೇ ಶ್ಲೋಕದಲ್ಲಿ

ತಥಾ ಚ ಶ್ರುತಯೋ ಬಹ್ವ್ಯೋ ನಿಗೀತಾ ನಿಗಮೇಷ್ವಪಿ
ಸ್ವಾಲಕ್ಷಣ್ಯ ಪರೀಕ್ಷಾರ್ಥಂ ತಾಸಾಂ ಶೃಣುತ ನಿಷ್ಕೃತೀಃ॥

ತಾತ್ಪರ್ಯವು ಹೀಗಿದೆ. ಸ್ತ್ರೀಯರು ಸಾಮಾನ್ಯವಾಗಿ ಚಪಲಚಿತ್ತರು,ವ್ಯಭಿಚಾರ ಮನಸ್ಕರು ಎಂಬುದರ ಬಗ್ಗೆ ವೇದಗಳಲ್ಲಿಯೆ ಅನೇಕ ಪ್ರಮಾಣಗಳಿವೆ.ಅವರ ವ್ಯಭಿಚಾರ ಸ್ವಭಾವದ ಲಕ್ಷಣಗಳು ಹಾಗೂ ಆ ವ್ಯಭಿಚಾರವೆಂಬ ಪಾಪಕ್ಕೆ ವಿಧಿಸಿದ ಪ್ರಾಯಶ್ಚಿತಗಳನ್ನು ಈಗ ಕೇಳಿರಿ ಎಂದು ಮುಂದಿನ ಶ್ಲೋಕಗಳಲ್ಲಿ ಮಹಿಳೆಯರನ್ನು ಹಿಗ್ಗಾಮುಗ್ಗಾ ಜಗ್ಗಾಡಿ ಹೆಣ್ಣಾಗಿ ಈ ದೇಶದಲ್ಲಿ ಹುಟ್ಟಲೆಬಾರದು ಎನಿಸುವಂತೆ ಮಾಡುತ್ತಾನೆ. ಇಂಥ ದಂಡಿ ದಂಡಿ ಉಲ್ಲೇಖಗಳು ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಎಡೆ ಪಡೆದಿರುವುದನ್ನು ಗಮನಿಸಬಹುದು. ಚಿಕ್ಕ ವಯಸ್ಸಿನಿಂದಲೂ ಈ ತರದ ಭಾವನೆಗಳನ್ನು ಒಂದಲ್ಲ ಒಂದು ಹಂತದಲ್ಲಿ ಗಂಡಸರ ಮೆದುಳಿನಲ್ಲಿ ತುಂಬಿಸಲಾಗುತ್ತದೆ.

ಸ್ತ್ರೀಯರ ಬಗೆಗೆ ಈ ರೀತಿಯ ದ್ವೇಷ ಹುಟ್ಟಿಸಲು ಕಾರಣವಾದರೂ ಏನಿರಬಹುದು? ಎಂಬುದರ ಬಗೆಗೆ ಉದ್ದಕ್ಕೂ ಜಿಜ್ಞಾಸೆಗಳು ನಡೆಯುತ್ತಿವೆ. ತನ್ನ ಗರ್ಭ ಸೀಳಿ ಇನ್ನೊಂದು ಜೀವಿಗೆ ಜನ್ಮ ಕೊಡಬಲ್ಲ ಧಾರಣ ಶಕ್ತಿಯನ್ನು ನಿಸರ್ಗದತ್ತವಾಗಿ ಪಡೆದಿರುವ ಸ್ತ್ರೀಯರ ಇದಿರು ಪುರುಷ ತನ್ನನ್ನು ತಾನು ಕಡಿಮೆ ಎಂದು ಭಾವಿಸಿಕೊಂಡನೆ? ಅಥವಾ ಮಹಿಳೆಯರು ರಕ್ತ,ಬೆವರು,ಕಣ್ಣೀರು ಮೂರನ್ನು ಸುರಿಸಿ ಪುರುಷರಿಗಿಂತ ಮೂರು ಪಟ್ಟು ಹೆಚ್ಚು ಕೆಲಸಮಾಡುವುದರಿಂದ ಅಪ್ರತಿಭನಾದನೆ? ಮೂಲದಲ್ಲಿ ಹೆಣ್ಣು ಎಂಬ ಜೀವ ತನ್ನ ಸಂತಾನದ ಸುರಕ್ಷತೆಗಾಗಿ ಆಕ್ರಮಣಕಾರಿಯಾಗಿರುವುದನ್ನು ಕಂಡು ಭಯಗ್ರಸ್ಥನಾದನೆ? ಏಕೆಂದರೆ ಕನ್ನಡದ ಪ್ರಾಚೀನ ಕಾವ್ಯವಾದ ಹರಿವಂಶದಲ್ಲಿ ಕವಿಯೊಬ್ಬ ಹೆಣ್ಣನ್ನು ವರ್ಣಿಸುವಾಗ ಒಂದೆಡೆ "ಈಂದ ಪುಲಿಯಾವೊಲರ್ದಳ್" ಎಂದು ಉದ್ಗಾರ ತೆಗೆದಿದ್ದಾನೆ. ಮಕ್ಕಳೊಂದಿಗಿತ್ತಿಯಾಗಿರುವ ಮಹಿಳೆಯು ಪ್ರಸವಿಸಿದ ಹುಲಿಯಂತೆ ಆರ್ಭಟಿಸುತ್ತಾಳೆ ಎಂಬ ಈ ಉಪಮೆಯು ಸ್ತ್ರಿಯರ ಸಾಮರ್ಥ್ಯವನ್ನು ಕಣ್ಣಿಗೆ ಕಟ್ಟುತ್ತದೆ. ಮೂಲದಲ್ಲಿ ಬಲಿಷ್ಟವಾಗಿದ್ದ ಮಹಿಳೆಯರನ್ನು ತನ್ನ ಆಧೀನದಲ್ಲಿಟ್ಟುಕೊಳ್ಳಲೆಂದು ಮತ್ತು ಸಂಪತ್ತನ್ನು ಹೆಚ್ಚಿಸುವ ಭೂಮಿಯ ಮೇಲೆ ಹಿಡಿತ ಸಾಧಿಸಲೆಂದು ಪುರುಷವರ್ಗವು ಸ್ತ್ರೀಯರನ್ನು ನಿಯಂತ್ರಿಸುವ,ತುಚ್ಚೀಕರಿಸುವ ಉಪದ್ವ್ಯಾಪಿತನಕ್ಕೆ ಇಳಿದಿರಲು ಸಾಕು. ಯೋನಿಯನ್ನು ಪಾಪವೆಂದು ಲಿಂಗವನ್ನು ಪವಿತ್ರವೆಂದು ಸ್ಥಿರಿಕರಿಸುವ ಧಾರ್ಮಿಕತೆಗೆ ಧಿಕ್ಕಾರ ಹೇಳದೆ ಗತ್ಯಂತರವಿಲ್ಲ. ಅವಳ ಜನ್ಮಜಾತ ಅಸೀಮ ಧಾರಣ ಶಕ್ತಿಯೊಂದಿಗೆ ಏಗಲೂ ಅಥವಾ ಸಹಕರಿಸಲು ಸಾಧ್ಯವಾಗದಿದ್ದಾಗ ಪುರುಷಲೋಕವು ಅವಳನ್ನು ಧಾರ್ಮಿಕವಾಗಿ,ಸಾಂಸ್ಕೃತಿಕವಾಗಿ ಆರ್ಥಿಕವಾಗಿ ಬಗ್ಗು ಬಡಿಯಲು ಹವಣಿಸಿದಂತೆ ತೋರುತ್ತದೆ. ಈ ಹೊತ್ತಿಗೂ ಪುರುಷರಿಗೆ ಅಕಾರಣ ಹೇವರಿಕೆ ಇದ್ದುದ್ದನ್ನು ಗಮನಿಸುತ್ತಿದ್ದೇವೆ. ಅತ್ಯಾಚಾರಿಗಳನ್ನು ಗುರುತಿಸುವಾಗ ಮನೋರೋಗ ತಜ್ಞರಾದ ಡಾ ಸಿ.ಆರ್.ಚಂದ್ರಶೇಖರ ಅವರು ಮೂರು ಪ್ರಭೇದಗಳನ್ನು ಮಾಡುತ್ತಾರೆ,೧) ಸ್ತ್ರೀದ್ವೇಷಿಗಳು ೨) ಪುರುಷತನದ ಸಾಬೀತು ಮತ್ತು ಪ್ರದರ್ಶನದ ವ್ಯಸನಿಗಳು ೩) ವಿಕೃತ ಕಾಮಿಗಳು. ಈ ಮೂರು ಬಗೆಯ ಪ್ರಭೇದಗಳಿಗೆ ತಲಹದಿಯಾದದ್ದು ಸ್ತ್ರೀವಿರೋಧಿ ಮನೋಭಾವವೆ ಎಂಬುದನ್ನು ಗಮನಿಸಿಬಹುದಾಗಿದೆ. ಅವಳು ಹೆಣ್ಣು ತಾನು ಗಂಡು ಎಂಬ ಭಾವವೆ ದ್ವೇಷಕ್ಕೆ ಕಾರಣವಾಗುವುದು ವಿಪರ್ಯಾಸವೆ ಸರಿ.

ಏನೆಂದರೆ ಏನು ಅರಿಯದ ಪುಟ್ಟ ಮಕ್ಕಳಲ್ಲಿ ಅದೂ ಇಂಗ್ಲೀಷ ಶಾಲೆಗಳಲ್ಲಿ ಓದುವ ಅನೇಕ ಮಕ್ಕಳಲ್ಲಿ ಗಂಡು ಹುಡುಗರು " ಛೀ ಗರ್ಲ್ಸ ಅಂದರೆ ನನಗಿಷ್ಟವಿಲ್ಲ ಎಂಬುದನ್ನು ಕೇಳಿ ದಂಗಾಗಿದ್ದೇವೆ. ಶಾಲೆಗಳಲ್ಲಿ ವಿರುದ್ಧ ಶಬ್ದಗಳನ್ನು ಬರೆಸುವಾಗ ಗಂಡ ಪದದ ವಿರುದಾರ್ಥ ಹೆಂಡತಿಯಂದೂ, ಹುಡುಗ–ಹುಡುಗಿ ಎಂದೂ ರಾಜ–ರಾಣಿ, ಕುಂಬಾರ–ಕುಂಬಾರಗಿತ್ತಿ.ಅಗಸ–ಅಗಸಗಿತ್ತಿ ಹೀಗೆ ಹತ್ತಾರು ಪದಗಳನ್ನು ಟಂಕಿಸಲಾಗಿದೆ. ಅಧ್ಯಯನದ ಈ ಮಾದರಿಗಳು ನಮಗರಿವಿಲ್ಲದೆ ಅಕಾರಣ ಭೇದವನ್ನು ಹುಟ್ಟಿಸುತ್ತವೆ. ಸಮಾಜ ವಿಜ್ಞಾನಿಗಳು ಗುರುತಿಸಿರುವಂತೆ ಹುಟ್ಟುವಾಗ ನಾವೆಲ್ಲ ಕೇವಲ ಮನುಷ್ಯರಾಗಿರುತ್ತೇವೆ.ನಂತರದಲ್ಲಿ ಜೀವಗಳನ್ನು ಹೆಣ್ಣು,ಗಂಡಗಳನ್ನಾಗಿ ಅಭಿವೃದ್ಧಿ ಪಡಿಸಲಾಗುತ್ತದೆ. ಹೆಣ್ಣು,ಗಂಡುಗಳಿಗಿರುವ ನಿಸರ್ಗಸಹಜ ಸಂತಾನಭಿವೃದ್ಧಿ ಪಾತ್ರತೆಯನ್ನು ಅವೈಜ್ಞಾನಿಕ ನೆಲೆಯಲ್ಲಿ ತರತಮಗೊಳಿಸುವ ವಿದ್ಯಮಾನಗಳು ಧರ್ಮ,ಸಂಸ್ಕೃತಿಯ ಮುಖವಾಡ ಹೊತ್ತು ಕ್ರೀಯಾಶೀಲವಾಗುತ್ತವೆ. ಸಮಾಜ ವ್ಯವಸ್ಥೆಯು ಗಂಡನಲ್ಲಿ ಮೇಲರಿಮೆ ಮತ್ತು ಅಹಂನ್ನು ತುಂಬಿದರೆ ಹೆಣ್ಣಿನಲ್ಲಿ ಕೀಳರಿಮೆ ಮತ್ತು ದೈನ್ಯತೆಯನ್ನು ಹೇರಲಾಗುತ್ತದೆ. ಈ ಭಾವಗಳೆ ಬಲಿತು ಸ್ತ್ರೀಯರು ಭೋಗ ನೀಡಬೇಕಾದವರು.ಪುರುಷರು ಭೋಗ ಪಡೆಯಬೇಕಾದವರು. ಅದು ಹೇಗಾದರೂ ಸೈ.ಒತ್ತಾಯ ಮಾಡಿ ಕಸಿದು ಕೊಳ್ಳುವುದು ಕೂಡ ಗಂಡಸಿನ ಗುಣ ಸ್ವಭಾವ. ಹಿಂಸಿಸಿ ಪಡೆದರಂತೂ ಪೌರುಷದ ಸಂಕೇತ ಎಂಬ ಭಾವವನ್ನು ಪುರುಷಪ್ರಧಾನ ಸಮಾಜ ಕಸಿ ಮಾಡಿಕೊಂಡು ಬಿಟ್ಟಿದೆ.

ಗಂಡಸರಿಗಿರುವ ಪೌರುಷದ ಗೀಳಂತೂ ಸ್ತ್ರೀಯರ ಪಾಲಿಗೆ ನರಕವೆ ಸರಿ. ಲೈಂಗಿಕವಾಗಿ ಅಸಹಾಯಕರಾದ ಗಂಡಸರು ಅವಕಾಶ ಸಿಕ್ಕಾಗಲೆಲ್ಲ ಶಿಶು,ಮಗು,ತಾಯಿ,ತಂಗಿ ಎನ್ನದೆ ತನ್ನ ಆಕ್ರಮಣಕಾರಿ ಹೇಯತನ ಮೆರೆಯುವುದು ಇದೆ. ಇನ್ನೊಂದೆಡೆ ಚಿಕ್ಕ ಮಕ್ಕಳನ್ನು ಭೋಗಿಸಿದರೆ ಲೈಂಗಿಕ ಗುಪ್ತ ರೋಗಗಳು ವಾಸಿಯಾಗುವವು ಎಂಬ ಮೌಢ್ಯಕ್ಕೂ ಕೊರತೆ ಇಲ್ಲ. ಋತುಮತಿಯಾಗದವಳನ್ನು ಭೋಗಿಸಿದರೆ ಸಾಮರ್ಥ್ಯ ಹೆಚ್ಚುವುದೆಂಬ ಮನೋಭಾವನೆಯು ಹರಳುಗಟ್ಟಿದೆ. ಹೆಣ್ಣನ್ನು ಪ್ರತಿಷ್ಟೆಯಾಗಿಸಿದ ವ್ಯವಸ್ಥೆಯಲ್ಲಿ ಪರಸ್ಪರರ ಜಗಳಕ್ಕೂ,ರಾಜ ಮಹಾರಾಜರ ಪ್ರಭುತ್ವಗಳ ತಿಕ್ಕಾಟಕ್ಕೂ ಸ್ತ್ರೀಯರನ್ನು ಲೈಂಗಿಕವಾಗಿ ದುರ್ಬಳಕೆ ಮಡಿಕೊಳ್ಳವುದನ್ನು ರೂಢಿಸಿಕೊಳ್ಳಲಾಗಿದೆ.ಮಹಾಭಾರತದ ದ್ರೌಪತಿಯೆ ಇದಕ್ಕೆ ಉದಾಹರಣೆ. ಕೌರವ–ಪಾಂಡವರ ದಾಯಾದಿ ಜಗಳಕ್ಕೆ ಆಕೆಯನ್ನು ತುಂಬಿದ ಸಭೆಯಲ್ಲಿ ತಂದು ಗುರು ಹಿರಿಯರ ಸಮ್ಮುಖದಲ್ಲಿಯೇ ಲೈಂಗಿಕ ಕಿರುಕುಳ ನೀಡಲಾಗುತ್ತದೆ. ದುಶ್ಯಾಸನ ಆಕೆಯನ್ನು ತುರುಬು ಹಿಡಿದು ಎಳೆದು ತರುವುದು,ದುರ್ಯೋಧನ ಆಕೆಯನ್ನು ಕಂಡು ತೊಡೆ ತಟ್ಟುವುದು ಇವೆಲ್ಲ ಲೈಂಗಿಕ ಶೋಷಣೆ ಅಲ್ಲವೆ? ಶೂರ್ಪನಖಿಯು ರಾಮನಲ್ಲಿ ಪ್ರೇಮ ಯಾಚಿಸಿದರೆ ಆತ ಲಕ್ಷ್ಮಣನಿಂದ ಅವಳ ಮೂಗು ಮುಡಿ ಕತ್ತರಿಸಿದ್ದು ಅಮಾನವೀಯ ಅಲ್ಲವೇ? ನಮ್ಮ ಇತಿಹಾಸದಲ್ಲಿ ವೈಭವಿಕರಿಸಲಾಗುವ ಸ್ತ್ರೀಕಾಳಗಗಳು.ಗೆದ್ದ ರಾಜರು ಸೋತ ರಾಜರ ಹೆಂಡತಿ ಮತ್ತು ರಾಣಿವಾಸದವರೊಂದಿಗೆ ನಡೆಸಲಾಗುತ್ತಿದ್ದ ದಬ್ಬಾಳಿಕೆಗಳು, ಯುದ್ಧ ನಿರತ ಸೈನಿಕರು ಕೊಳ್ಳೆ ಹೊಡೆಯುತ್ತಿದ್ದ ಊರಿನ ಹೆಣ್ಣುಮಕ್ಕಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸುತ್ತಿದದ್ದು ಇವೆಲ್ಲವು ಸ್ತ್ರೀಯರನ್ನು ಸಂಪತ್ತಿನ ಭಾಗವಾಗಿ,ಅವಳ ದೇಹವನ್ನು ಭೋಗದ,ಮನೋರಂಜನೆಯ ವಸ್ತುವಾಗಿ ಗ್ರಹಿಸಿದ್ದರ ಪರಿಣಾಮವಾಗಿಯೇ ಅಸ್ತಿತ್ವಗೊಂಡಿವೆ.

ವಿಕೃತ ಕಾಮಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಕೂಡ ಈ ಹೊತ್ತಿನ ಬಹು ದೊಡ್ಡ ದುರಂತ. ಪರಂಪರಾಗತ ನಂಬಿಕೆ,ನೆಲೆಗಳೊಂದಿಗೆ ಆಧುನಿಕ ವಿದ್ಯಮಾನಗಳು ಮನುಷ್ಯರ ಪಶುಸಹಜ ಮನೋವೃತ್ತಿಗಳಿಗೆ ಆಜ್ಯ ಹೊಯ್ಯುತ್ತಿದ್ದು ಪುರುಷರನ್ನು ಇನ್ನಷ್ಟು ವಿಕಾರಿಗಳನ್ನಾಗಿಸುತ್ತಿದೆ. ಜಾಗತಿಕರಣದ ಜಾತ್ರೆಯಲ್ಲಿ ಗ್ರಾಮಗಳಲ್ಲಿ ಉದ್ಯೋಗ ಕಳೆದು ಕೆಳ ಮತ್ತು ಮಧ್ಯಮ ವರ್ಗದ ಜನತೆ ಹೊಟ್ಟೆ ಪಾಡಿಗಾಗಿ ಅಪಾರ ಸಂಖ್ಯೆಯಲ್ಲಿ ನಗರಗಳಿಗೆ ವಲಸೆಯಾಗುತ್ತಿದ್ದು ದೀರ್ಘ ಕಾಲದವರೆಗೆ ಹೆಂಡತಿ,ಮಕ್ಕಳು,ಸಂಸಾರದಿಂದ ದೂರ ಉಳಯುವ ಒತ್ತಡಕ್ಕೆ ಒಳಗಾಗುತ್ತಿದ್ದಾರೆ.ಸೂಕ್ತ ಮಾರ್ಗದಲ್ಲಿ ದೇಹದ ಬಾದೆ ತೀರಿಸಿಕೊಳ್ಳಲು ಸಾಧ್ಯವಿಲ್ಲದಿರುವಾಗ ಕೈಗೆ ಸಿಕ್ಕ ಮಹಿಳೆಯರ

ಮೇಲೆ ಅವಕಾಶ ಸಿಕ್ಕರೆ ಸಾಕು ಎರಗುತ್ತಿದ್ದಾರೆ. ಆದ್ದರಿಂದಲೆ ಅತ್ಯಾಚಾರ ಎಸಗುತ್ತಿರುವವರಲ್ಲಿ ಪುಂಡ,ಪೋಕರಿಗಳಷ್ಟೆ ಅಲ್ಲ ಶಿಕ್ಷಕ,ವಕೀಲ,ಡಾಕ್ಟರ್.ಜಡ್ಜ,ಪತ್ರಕರ್ತ.ಶಾಸಕ,ಮಂತ್ರಿ

ಮಹೋದಯರು ಸೇರಿಕೊಳ್ಳುತ್ತಿದ್ದಾರೆ. ಇನ್ನು ಅಸಹಜ ರೀತಿಯಲ್ಲಿ ಮನಸಿನ ಮೇಲೆ ನಿಯಂತ್ರಣ ಸಾಧಿಸುವ ಸೋಗ ಹಾಕುತ್ತಿರುವ ಸ್ವಾಮಿಜಿಗಳ ಭಾನಗಡಿಗಳಂತೂ ನಾಗರಿಕ ಸಮಾಜ ಬೆಚ್ಚಿ ಬೀಳುವಂತೆ ಮಾಡುತ್ತಿದೆ. ಸನ್ಯಾಸತ್ವ,ಮಠಾಧೀಶತ್ವವು ಇತ್ತಚೇಗೆ ಬಂಡವಾಳವಿಲ್ಲದ ಬಹು ದೊಡ್ಡ ಉದ್ಯಮವಾಗಿರುವುದರಿಂದ ಹುಸಿ ಸನ್ಯಾಸಿಗಳ ಸಂಖ್ಯೆಯು ಹೆಚ್ಚುತ್ತಿದ್ದು ಅವರ ನಡೆಸುವ ಲೈಂಗಿಕ ದೌರ್ಜನ್ಯಗಳು ಹೆಚ್ಚುತ್ತಿವೆ. ಬಂಡವಾಳಶಾಹಿ ಲೋಕಕ್ಕೆ ಸ್ತ್ರೀಯರ ಅಂಗಾಂಗಳೆ ಪ್ರಾಂಪ್ಟ ಬಂಡವಾಳ.ಅದು ತನ್ನ ಉದ್ಯಮಶೀಲತೆಗಾಗಿ ಪುರುಷಲೋಕವನ್ನು ಅನಾರೋಗ್ಯಕರ ರೀತಿಯಲ್ಲಿ ಪ್ರಚೋದಿಸುತ್ತದೆ.ಕಾಮವನ್ನೆ ಲಾಭದ ಕೇಂದ್ರವಾಗಿಸಿಕೊಂಡು ವಿಕೃತಿ,ವಿಕಾರಗಳನ್ನು ಪೋಷಿಸುತ್ತದೆ. ಮುಕ್ತ ಮಾರುಕಟ್ಟೆಯ ವಹಿವಾಟುಗಳು,ವಿವಿಧ ಉತ್ಪನ್ನಗಳಿಗಾಗಿ ಹರಿಬಿಡುವ ಪ್ರಚೋದನಕಾರಿ ಜಾಹೀರಾತುಗಳು,ಬ್ಲೂಫಿಲ್ಮ್,ಗುಂಪು ಲೈಂಗಿಕತೆಗೆ ಇಂಬುಕೊಡುವ ಸೆಕ್ಸ ಪೋಲ್ಡರ್,ಚಿಕ್ಕ ಮಕ್ಕಳೊಂದಿಗೆ ನಡೆಸುವ ಲೈಂಗಿಕ ದುರಾಕ್ರಮಣಗಳ ಸೆಕ್ಸ ಪೋಲ್ಡರ್,ಪಾಳೆಗಾರಿ ಮೌಲ್ಯಗಳನ್ನು ಬಿಂಬಿಸುವ ಸೀನೆಮಾ,ಮೇಘಾ ಸಿರಿಯಲ್,ಲೈಫ್ ಷೋ,ಇಂಟರ್‌ನೆಟ್‌ಗಳಲ್ಲಿ ಸುಲಭವಾಗಿ ದಕ್ಕುವ ಸೆಕ್ಸ,ಸೈಬರ್ ಸೆಂಟರ್,ಮೊಬೈಲ್ಗಳಲ್ಲಿ ಹರಿದಾಡುವ ಅಶ್ಲೀಲ,ವಿಕೃತ ಕಾಮಕೇಳಿಗಳು ಒಂದೇ ಎರಡೇ ಪುರುಷರೊಳಗಿನ ಪಶುತ್ವವನ್ನು ಪ್ರಚೋದಿಸಲು ಲೆಕ್ಕವಿಲ್ಲದಷ್ಟು ವಿದ್ಯಮಾನಗಳು ನಡೆಯುತ್ತಿವೆ.ಮಾಹಿತಿ ತಂತ್ರಜ್ಞಾನದಲ್ಲಾದ ಬೆಳವಣಿಗೆಯು ಮಹಿಳೆಯರಿಗೆ ವರವಾಗುವ ಬದಲು ಶಾಪವಾಗಿ ಪರಿಣಮಿಸಿದ್ದು ಈ ಹೊತ್ತಿನ ದೊಡ್ಡ ವಿಪರ್ಯಾಸ. ದುಬಾರಿಯಾಗುತ್ತಿರುವ ಜೀವನ ನಿರ್ವಹಣೆಯು ಹೊಸ ಪೀಳಿಗೆಯನ್ನು ಸಾಂಸಾರಿಕ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತೆ ಮಾಡುತ್ತಿದೆ. ಮಧ್ಯಮ ವರ್ಗದ ಐ.ಟಿ,ಸಾಫ್ಟವೇರ್ ಮಂದಿಗೆ ಲೈಂಗಿಕ ಭೋಗ ಬೇಕು.ಆದರೆ ಹೆಂಡತಿ ಮಕ್ಕಳು ಸಾಂಸಾರಿಕ ಭಾರ ಬೇಕಿಲ್ಲ. ಕಾಮದಾಹಕ್ಕಾಗಿ ಹಾತೊರೆಯುವ ಈ ಸಮುದಾಯವು ಕಂಡ ಕಂಡಲ್ಲಿ ತೀಟೆ ತೀರಿಕೊಳ್ಳುವ ಚಪಲಕ್ಕೆ ಬಿದದ್ದು ಇದೆ. ಜನ್ನ ಕವಿಯು ಹೇಳಿರುವಂತೆ “ವಿಧಿವಿಳಸನದ ನೆರಂ ಬಡೆಯೆ ಮನಸಿಜನ ಮಾಯೆ ಕೊಂದು ಕೂಗದೆ ನರರಂ” ಕಾಮವೆಂಬುದೆ ಅದಮ್ಯವಾದ ಬಯಕೆ.ಅದಕ್ಕೆ ಅಹಂ ಮತ್ತು ಸಂಪತ್ತು ಸೇರಿಕೊಂಡರಂತೂ ಮಹಾ ಪ್ರಳಯವೆ ಸಂಭವಿಸದಿರದು.

ಮಹಿಳೆಯರ ಮೇಲೆ ಮಾರಣಾಂತಿಕವಾಗಿ ಎರಗುತ್ತಿರುವ ಈ ವಿಕೃತಿ ನಿಲ್ಲದೆ ಹೋದರೆ ಮಾನವ ಸಮುದಾಯಕ್ಕೆ ದುರಂತ ತಪ್ಪಿದಲ್ಲ. ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ನಮ್ಮ ಸಮಾಜ ಇವತ್ತಿಗೂ ಅದು ಮಹಿಳೆಯರ ಸಮಸ್ಯೆ ಮಾತ್ರ ಎಂದು ಪರಿಭಾವಿಸುತ್ತಿದೆ. ಹೀಗೆಂದೆ ಪುರುಷರು ಅತ್ಯಾಚಾರದ ಚರ್ಚೆ ಬಂದಾಗಲೆಲ್ಲ ಅದಕ್ಕೆಲ್ಲಾ ಮಹಿಳೆಯರೇ ಕಾರಣ,ಅವರು ಉಡುತ್ತಿರುವ ಬಟ್ಟೆ,ಅವರ ವೈಯಾರವೆ ಕಾರಣ.ನಮ್ಮ ಸನಾತನ ಸಂಸ್ಕೃತಿಯ ನಾಶವಾಗುತ್ತಿರುವುದೆ ಕಾರಣ ಎಂದು ಬೊಬ್ಬಿಡುತ್ತವೆ. ವಾಸ್ತವ ಅದಲ್ಲ. ಮಹಿಳೆಯರ ದೌರ್ಜನ್ಯವು ಒಟ್ಟು ಮಾನವ ಸಮುದಾಯದ ಸಮಸ್ಯೆಯಾಗಿದೆ.ಅಸಮಾನ ವ್ಯವಸ್ಥೆಯು ಹುಟ್ಟು ಹಾಕಿದ ಅನಾರೋಗ್ಯಕರ ಪಿಡುಗು ಆಗಿದೆ.ಈ ಪಿಡುಗಿಗೆ ಇಡೀ ಮಾನವ ಸಮುದಾಯವೆ ಬಲಿಯಾಗುತ್ತಿದೆ. ದೇಶದ ಸಮಗ್ರ ಅಭಿವೃದ್ಧಿಯು ಸಾಧಿತವಾಗಲು ಗಂಡುಹೆಣ್ಣುಗಳಾದಿ ಮೂರನೇ ಲಿಂಗದವರು ಸಹಿತ ಸಮತೋಲನವಾಗಿ ಸಮಾನವಾಗಿ ಅನಿರ್ಭಾದಿತವಾಗಿ ಬದುಕುವಂತಾಗಬೇಕು. ಹೀಗಾಗಲು ಮಹಿಳೆಯರನ್ನು ನೋಡುವ ದೃಷ್ಟಿ–ಧೋರಣೆಯಲ್ಲಿ ತಲಸ್ಪರ್ಶಿ ಬದಲಾವಣೆ ಬರಬೇಕು. ಬದಲಾವಣೆಯ ಹಾದಿಯಲ್ಲಿ ಮಹಿಳಾಪರ ಕಾನೂನುಗಳು ಬೇಕು.ಕಾನೂನು ಮಾತ್ರದಿಂದಲೆ ಅತ್ಯಾಚಾರಗಳು ಸಂಪೂರ್ಣ ನಿಲ್ಲಲಿಕ್ಕಿಲ್ಲ.ಆದರೆ ಕಾನೂನುಗಳಿಲ್ಲದೆ ಅತ್ಯಾಚಾರದಂಥ ಅನಿಷ್ಟಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ಜನರ ಮೈಂಡಸೆಟ್ ಬದಲಾಗಲು ಕೂಡ ಪ್ರಜಾ ಕಾನೂನುಗಳು ಬಹು ದೊಡ್ಡ ಅಸ್ತ್ರವಾಗಿರುತ್ತವೆ. ಬಹು ದಿನದ ಒತ್ತಡ,ದೇಶದಾದ್ಯಂತ ಅತ್ಯಾಚಾರ ಕುರಿತು ಜನತೆಯ ಆಂದೋಲನದಿಂದಾಗಿ ಪೋಸ್ಕೊದಂಥ ಕಾನೂನನ್ನು ತರಲಾಗಿದೆ.ಈಗ ಅದರ ಅನುಷ್ಟಾನದ ಇಚ್ಛಾಶಕ್ತಿಯ ಪ್ರಶ್ನೆ ಇದೆ. ತಂಗಡಗಿ ಘಟನೆಯಲ್ಲಿ ಆಗಿರುವುದೇನೆಂದರೆ ಅತ್ಯಾಚಾರ ಘಟಿಸಿದ ನಂತರ ತಕ್ಷಣವೆ ಆಗಬೇಕಾದ ಯಾವುದೇ ಪ್ರಕ್ರಿಯೆಗಳನ್ನು ಜವಾಬ್ದಾರಿಯಿಂದ ನಿಭಾಯಿಸಿಲ್ಲ. ಮತ್ತದೇ ಮೇಲ್ಜಾತಿ,ಮೇಲ್ವರ್ಗದ ದರ್ಪ,ದಬ್ಬಾಳಿಕೆ, ವಶೀಲಿಬಾಜಿ,ರಾಜಕೀಯ ಒತ್ತಡ,ಪೋಲೀಸ್ ಇಲಾಖೆಯ ನಿಷ್ಕೀಯತ್ವಗಳುಗಳು ಎದುರಾಗಿವೆ. ಘಟನೆ ನಡೆದು ತಿಂಗಳಾದರೂ ಅಪರಾಧಿಗಳು ಕಣ್ಣೆದುರೆ ಓಡಾಡುತ್ತಿರುವಾಗಲೂ ಯಾವೂದೇ ಪುರಾವೆಗಳಿಲ್ಲ ಎಂದು ಕುಂಟುನೆಪ ಹೇಳುತ್ತ ಅವರನ್ನು ಬಂಧಿಸದಿರುವುದು. ಮಹಿಳಾ ಸಂಘಟನೆಗಳು ಒತ್ತಡ ತಂದಾಗಲೂ ಪರಿಸ್ಥಿತಿಯ ಕಾವು ತಗ್ಗಿಸಲೆಂದು ಅಪರಾಧಿಗಳನ್ನು ಬಂಧಿಸಲಾಗಿದೆಯಾದರೂ ದಿನ ಬೆಳಗಾಗುವುದರಲ್ಲಿ ವೈದ್ಯಕೀಯ ವರದಿಯನ್ನು ತಿದ್ದಿರುವುದು. ಚಾರ್ಜಸೀಟು ಹಾಕುವಾಗ ಅಪರಾಧಿಗಳು ತಪ್ಪಿಸಿಕೊಳ್ಳುವಂತೆ ಮಾಡುವುದು ಇವೆಲ್ಲವು ನಡೆಯುತ್ತಿವೆಯಾದರೂ ಕೈಗೆ ಒದಗಿ ಬಂದ ಕಾನೂನಿನ ಫಲ ಪಡೆಯುವಲ್ಲಿಯೂ ನಿರಂತರ ಹೋರಾಟ ಮಾಡುವ ಅನಿವಾರ್ಯತೆ ಇದ್ದೆ ಇರುತ್ತದೆ. ಈ ದೇಶದಲ್ಲಿ ದಲಿತರು,ಮಹಿಳೆಯರು ಮತ್ತು ಬಡವರಿಗೆ ಸಂಘರ್ಷವಿಲ್ಲದೆ ಯಾವುದೆ ನ್ಯಾಯ ಅಥವಾ ಸೌಲಭ್ಯಗಳು ಸಿಕ್ಕಿಲ್ಲ.ಮುಂದೆಯೂ ಕೂಡ ಸಿಗುವಂತಿಲ್ಲ. ಸದರಿ ಕಾನೂನು ಫಲಪ್ರದವಾಗಲು ಅದರ ಪರಿಣಾಮಕಾರಿ ಅನುಷ್ಟಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ತಲಸ್ಪರ್ಶಿ ಬದಲಾವಣೆ ತರುವ ಅರಿವಿನ ಆಂದೋಲನವನ್ನು ಜೊತೆ ಜೊತೆಯಾಗಿಯೆ ಮಾಡಬೇಕಾಗುತ್ತದೆ.ಅತ್ಯಾಚಾರ ಪ್ರವೃತ್ತಿಯ ಬೇರು ಬುಡಗಳನ್ನು ಕತ್ತರಿಸದಿದ್ದರೆ ಕಾನೂನು ಕೂಡ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾದೀತು.

## References


1. All Kannada Daily News papers and magazine.
2. The Hindu (English) Paper
3. Deccan Herald Paper
4. Internet
5. Discussion with scholar.